ತುಂಬಿಕೊಳ್ಳುತ್ತಾ ಹೋದೆ. ನೂರಾರು ವರ್ಷಗಳಿಂದ ಸಮಾಜಕ್ಕೆ ವ್ರಣವಾಗಿರುವ 'ಜಾತಿ'ಯ ಕೇಡನ್ನು ನಿರ್ಮೂಲನೆ ಮಾಡಲು ಮಹಿಳೆಯರೇ ಸದಾ ಮುಂಚೂಣಿಯಲ್ಲಿರುತ್ತಾರೆ' ಎಂಬ ತಿಳಿವು ನನ್ನ ಅರಿವಿಗೆ ಬಂದಿತು. ಎಲ್ಲರ ಒಳಿತಿಗಾಗಿ ನಡೆಸುವ ಸಹಜೀವನದ ಇಂತಹ ಆಚರಣೆಗಳು ಸಾಮೂಹಿಕ ಸಂಬಂಧಗಳನ್ನು ಬಲಗೊಳಿಸುತ್ತದೆ ಎಂಬುದನ್ನು ಮನಗಂಡೆ.

ನಾನು ಕಂಡಂತೆ, 'ಹೊರಬೀಡು' ಆಚರಣೆಯನ್ನು ಹೆಚ್ಚು ಸಂಭ್ರಮಿಸುತ್ತಿದ್ದವರು ನಮ್ಮ ಊರಿನ ಮಹಿಳೆಯರು! ಸಮೂಹದ ಒಳಿತಿಗಾಗಿ ನಡೆಯುತ್ತಿದ್ದ ಈ ಆಚರಣೆಯಲ್ಲಿ, ಒಲವಿನಿಂದಲೋ ಅಥವಾ ಔದಾರ್ಯದಿಂದಲೋ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದನ್ನು ನಾನು ನೋಡಿದ್ದೇನೆ. ಮಹಿಳೆಯರಿಲ್ಲದ ಈ ಆಚರಣೆಯನ್ನು ನಾನು ಊಹಿಸಿಕೊಳ್ಳಲಾರೆ! ಕಗ್ಗತ್ತಲ ಕೋಣೆಯಲ್ಲಿ ಬಂದಿಯಾಗಿದ್ದ ಅವರಿಗೆ ಇದೊಂದು ಬಗೆಯ ಬಿಡುಗಡೆ! ಈ ರೀತಿಯ ಸಹಜೀವನದಲ್ಲಿ ಮುಖ್ಯವಾಗಿ ಮಹಿಳೆಯರು ಅಸಾಧಾರಣ ಕೌಶಲವನ್ನು ತೋರುತ್ತಾರೆ. ಸಹಜವಾಗಿ ಹೆಣ್ಣಿನಲ್ಲಿ 'ಪೊರೆ'ಯುವ ಮತ್ತು 'ತಾಳಿಕೊಳ್ಳುವ ಹಾಗೂ ಪ್ರತಿರೋಧಿಸುವ' ಶಕ್ತಿ ಅಧಿಕವಾಗಿರುವ ಕಾರಣಕ್ಕಾಗಿಯೇ ಅವರ ಪಾಲ್ಗೊಳ್ಳುವಿಕೆ ಯಾವುದೇ ಸಮಾಜಕ್ಕೆ ಬಲ ತುಂಬುತ್ತದೆ. ಇದನ್ನು ಹೆಚ್ಚು ಬಲ್ಲವರಾಗಿದ್ದ ರಾಮಮನೋಹರ ಲೋಹಿಯಾ 'ಭಾರತೀಯ ಹೆಣ್ಣು ದ್ರೌಪದಿಯಂತಿರಬೇಕು' ಎಂದು ಹೇಳಿದ್ದರು.

'ಹೊರಬೀಡು' ಮುಗಿಸಿ ಸಂಜೆಹೊತ್ತಿಗೆ ಮರಳಿ ಮನೆಗೆ ಎಲ್ಲರೂ ಹೊರಡುತ್ತಾರೆ. ಹೀಗೆ ಬರುವಾಗ ಮೂರು ದಾರಿ ಕೂಡುವ ಸ್ಥಳದಲ್ಲಿ ಬೆಂಕಿ ಹಾಕುತ್ತಾರೆ. ಮನೆಯಿಂದ ತಂದಿದ್ದ ಹಳೆಯ ಪೊರಕೆ, ಮೊರ, ಹಿಟ್ಟಿನ ದೆಬ್ಬೆ, ಚಿಬ್ಬಲು, ಹರಿದ ಚಾಪೆ, ವಂದರಿ ಮುಂತಾದ ನಿರುಪಯೋಗಿ ವಸ್ತುಗಳನ್ನು ಬೆಂಕಿಗೆ ಹಾಕಿ 'ಹೋಯಿತು' ಎಂದು ಹೇಳಿ ಊರಿಗೆ ಪ್ರವೇಶಿಸುತ್ತಾರೆ. ಹೀಗೆ ಹಳೆಯದನ್ನೆಲ್ಲಾ ಕಳೆದುಕೊಂಡು, ಹೊಸ ಮನಸ್ಸಿನಿಂದ ಮರಳುತ್ತಾರೆ. ಮನೆಗೆ ಹೋಗುವ ಮೊದಲು, ರಂಗನಾಥಸ್ವಾಮಿ ಗುಡಿಗೆ ಹೋಗಿ ಹಣ್ಣುಕಾಯಿ ಮಾಡಿಸಿ, ಅಲ್ಲಿಂದ ತಂದ ತೀರ್ಥವನ್ನು ಮನೆಗೆಲ್ಲಾ ಚಿಮುಕಿಸುತ್ತಾರೆ. ನಂತರ ತಮ್ಮ ದನ–ಕರುಗಳೊಂದಿಗೆ ಒಳಗೆ ಪ್ರವೇಶಿಸುತ್ತಾರೆ. ಅಲ್ಲಿಗೆ 'ಹೊರಬೀಡು' ಆಚರಣೆ ಮುಗಿಯುತ್ತದೆ.

ಸಮಾಜವೊಂದು ತನ್ನೊಳಗಿನ ತರತಮ ಭಾವಗಳನ್ನು ಕಳೆದುಕೊಳ್ಳಲು ಸಹಾಯಕವಾಗುವ ಜೀವನದ ತತ್ತ್ವಗಳು ಈ ಆಚರಣೆಯಲ್ಲಿ ಅಡಗಿವೆ. ಏಕತೆ ಸಾಧಿಸುವ ಹಾದಿಯಲ್ಲಿ ಮುಳ್ಳಾಗಿರುವ ಜಾತಿಯ ಕಟ್ಟುಪಾಡುಗಳನ್ನು ಉಲ್ಲಂಘಿಸುವ ಮಾರ್ಗಗಳನ್ನು ಸಮಾಜವು ಕಾಲ ಕಾಲಕ್ಕೆ ತಾನೇ ಕಂಡುಕೊಂಡಿದೆ. ಅದರಲ್ಲಿ 'ಹೊರಬೀಡು' ಆಚರಣೆಯೂ ಒಂದು.


### ಜಿ.ವಿ. ಆನಂದಮೂರ್ತಿ

ಲೇಖಕರು ತುಮಕೂರಿನ ತಿಗಳರ ಗೊಲ್ಲಹಳ್ಳಿ, ಬೆಳ್ಳಾವಿ ಮಜರೆ ಗ್ರಾಮದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ, ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. 'ಪ್ರಜಾವಾಣಿ' ಮತ್ತು 'ಮಯೂರ' ಪತ್ರಿಕೆಗಳಲ್ಲಿ ಕತೆ ಮತ್ತು ಪ್ರಬಂಧಗಳು ಪ್ರಕಟಗೊಂಡಿವೆ. ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ. 'ನೀರಗಂಧ', 'ಜಾಲಾರ ಹೂವು ಮತ್ತು ಇತರ ಪ್ರಬಂಧಗಳು', 'ಹೊಳೆ ಸಾಲು', 'ಹರಿವ ಹೊಳೆ' ಅವರ ಕೆಲವು ಪುಸ್ತಕಗಳು.